# ಹಾಸನ ಜಿಲ್ಲೆಯ ಶೈವ ಮತ್ತು ಶರಣ ಧರ್ಮ: ಒಂದು ಚಾರಿತ್ರಿಕ ಅವಲೋಕನ

**ರೇವಣಸಿದ್ದಪ್ಪ ಎಸ್.***

**DOI: https://doi.org/10.5281/zenodo.21794209**

**ABSTRACT**

ಹಾಸನ ಜಿಲ್ಲೆಯು ಕರ್ನಾಟಕದ ಸಾಂಸ್ಕೃತಿಕ ಮತ್ತು ಧಾರ್ಮಿಕ ಇತಿಹಾಸದಲ್ಲಿ ಅತ್ಯಂತ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಕದಂಬ, ಗಂಗ, ಕಲ್ಯಾಣ ಚಾಲುಕ್ಯ ಹಾಗೂ ವಿಶೇಷವಾಗಿ ಹೊಯ್ಸಳರ ಆಡಳಿತದ ಅವಧಿಯಲ್ಲಿ ಈ ಭಾಗದಲ್ಲಿ ಶೈವ ಧರ್ಮವು ತನ್ನ ಸುವರ್ಣಯುಗವನ್ನು ಕಂಡಿತು. ಕಾಳಾಮುಖ, ಪಾಶುಪತ, ಶಾಕ್ತದಂತಹ ವಿವಿಧ ಶೈವ ಪಂಥಗಳು ಇಲ್ಲಿ ವ್ಯಾಪಕವಾಗಿ ಬೆಳೆದವು. ದೇವಾಲಯಗಳು ಕೇವಲ ಪೂಜಾ ತಾಣಗಳಾಗದೆ ವಿದ್ಯಾದಾನ, ಅನ್ನದಾನ ಮತ್ತು ಸಮಾಜಮುಖಿ ಕೇಂದ್ರಗಳಾಗಿದ್ದವು. ಧಾರ್ಮಿಕ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಮಹಿಳೆಯರ ಸಕ್ರಿಯ ಪಾತ್ರವು ಇಲ್ಲಿನ ಶಾಸನಗಳಲ್ಲಿ ಸ್ಪಷ್ಟವಾಗಿ ದಾಖಲಾಗಿದೆ. ಕಾಲಾಂತರದಲ್ಲಿ, ಶೈವ ದೇವಾಲಯಗಳಲ್ಲಿ ಹೆಚ್ಚಾದ ಮಡಿವಂತಿಕೆ ಹಾಗೂ ಡಾಂಭಿಕತೆಯನ್ನು ವಿರೋಧಿಸಿ, ಸ್ಥಾವರವಾದ 'ನೆಲೆ ದೇಗುಲ'ಗಳಿಗಿಂತ ಜಂಗಮ ರೂಪದ 'ನಡೆ ದೇಗುಲ'ವೇ ಶ್ರೇಷ್ಠವೆಂಬ ವೈಚಾರಿಕ ಕ್ರಾಂತಿಯನ್ನು ಶರಣ ಧರ್ಮವು ಹೇಗೆ ತಂದಿತು ಎಂಬುದನ್ನು ಶಾಸನಗಳು ಹಾಗೂ ಪುರಾತತ್ತ್ವ ಆಧಾರಗಳ ಹಿನ್ನೆಲೆಯಲ್ಲಿ ಐತಿಹಾಸಿಕವಾಗಿ ವಿಶ್ಲೇಷಿಸಲಾಗಿದೆ.

**KEYWORDS:** ಹಾಸನ ಜಿಲ್ಲೆ, ಶೈವ ಧರ್ಮ, ಶರಣ ಧರ್ಮ, ಕಾಳಾಮುಖ ಪಂಥ, ನೆಲೆ ಮತ್ತು ನಡೆ ದೇಗುಲ.

* **ಡಾ. ರೇವಣಸಿದ್ದಪ್ಪ ಎಸ್.,** ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ, ಚಿತ್ರದುರ್ಗ.

ಕರ್ನಾಟಕ ಭಾರತದ ಸಾಂಸ್ಕೃತಿಕ ಶ್ರೇಷ್ಠತೆಯ ಪೋಷಣೆಯ ತವರು. ಈ ನೆಲದಲ್ಲಿ ಶೈವ ಮತ್ತು ಶರಣ ಧರ್ಮ ಅಭೂತಪೂರ್ವ ಬೆಳವಣಿಗೆ ಹೊಂದಿದೆ. ಈ ಕಾರಣದಿಂದ ಹಾಸನ ಜಿಲ್ಲೆ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ವಿಶಿಷ್ಟವಾಗಿದೆ. ಹಾಸನ ಜಿಲ್ಲೆಯ ಶೈವ ಧರ್ಮದ ಇತಿಹಾಸದ ಕುರುಹುಗಳಾಗಿ ದೇವಾಲಯಗಳು, ದಾನದತ್ತಿ ಶಾಸನಗಳು, ಕಲೆ, ವಾಸ್ತುಶಿಲ್ಪದ ನವೀನ ಶೈಲಿಗಳು, ದೇವರು ದೇವಾಲಯಗಳಿಗೆ ಸಂಬಂಧಿಸಿದ ಮೂರ್ತಿಶಿಲ್ಪದ ಪ್ರಭೇಧಗಳು, ಸಾಂಸ್ಥಿಕ ಧರ್ಮಗಳಲ್ಲಿನ ಸಂಪ್ರದಾಯ, ಸಂಘರ್ಷ, ಸಮನ್ವಯತೆ, ಮಠಮಾನ್ಯಗಳು, ಇಲ್ಲಿನ ಧರ್ಮಗಳ ಹಿನ್ನೆಲೆಯ ಸಮಾಜ, ಸಂಸ್ಕೃತಿ, ನಂಬಿಕೆ ಮತ್ತು ಆಚರಣೆಗಳು ಹೀಗೆ ಮುಂತಾದ ವಿಭಿನ್ನತೆಗಳ ಏಕತೆಯ ತವರು ಹಾಸನ ಜಿಲ್ಲೆ.

ಕರ್ನಾಟಕದ ಧಾರ್ಮಿಕ ಚರಿತ್ರೆಯಲ್ಲಿ ಜೈನ, ಶೈವ ಮತ್ತು ವೈಷ್ಣವ ಈ ಮೂರೂ ಧರ್ಮಗಳಿಗೆ ಭದ್ರ ನೆಲೆ ದೊರಕಿಸಿಕೊಟ್ಟ ಹಾಗೂ ಅನೇಕ ಧಾರ್ಮಿಕ ಬದಲಾವಣೆಗಳಿಗೆ ತೆರೆದುಕೊಂಡು ಶೈವ ಧರ್ಮಕ್ಕೆ ವಿಶೇಷ ಮಾನ್ಯತೆ ನೀಡಿ ಅದರ ಬೆಳವಣಿಗೆ ಸಾಧಿಸಿದ ಹೊಯ್ಸಳರ ನೆಲೆಬೀಡಾದ ಹಾಸನ ಜಿಲ್ಲೆಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಅರಿಯುವುದೇ ಈ ಲೇಖನದ ಉದ್ದೇಶವಾಗಿದೆ. ಹಾಸನ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳು, ದೇವಾಲಯಗಳು, ಶಿಲ್ಪಗಳು, ವೀರಗಲ್ಲುಗಳು, ಶೈವ ಪುರಾತತ್ವ ಅವಶೇಷಗಳು ಹಾಗೂ ಕೃತಿ–ಕಾವ್ಯಗಳನ್ನು ಪೂರಕವಾಗಿಟ್ಟುಕೊಂಡು ಈ ಲೇಖನವನ್ನು ರೂಪಿಸಲಾಗಿದೆ. ಈಗಾಗಲೇ ಲಭ್ಯವಿರುವ ಆಕರಗಳಲ್ಲಿ ಹೊಸ ನೋಟಗಳನ್ನು ಹಾಗೂ ಚಿಂತನೆಗಳನ್ನು ಹುಡುಕುವ ಮತ್ತು ಅವುಗಳನ್ನು ವಿಭಿನ್ನ ದೃಷ್ಟಿಕೋನದಿಂದ ವಿಶ್ಲೇಷಿಸುವ ವಸ್ತುನಿಷ್ಠತೆಯನ್ನು ಪ್ರಸ್ತುತ ಲೇಖನದಲ್ಲಿ ಸಾದರಪಡಿಸಲಾಗಿದೆ.

ಈ ಪ್ರದೇಶವನ್ನು ಮೌರ್ಯರನ್ನು ಒಳಗೊಂಡಂತೆ ಶಾತವಾಹನ, ಕದಂಬ, ಗಂಗ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ ಅರಸರು, ಮೈಸೂರು ಒಡೆಯರು ಸೇರಿದಂತೆ ಬೇಲೂರು ತಗರೆ ನಾಯಕರು ಹಾಗೂ ಇತರೆ ಸಣ್ಣಪುಟ್ಟ ಪಾಳೆಯಗಾರರು ಆಳ್ವಿಕೆ ನಡೆಸಿದ್ದಾರೆ. ಈ ಜಿಲ್ಲೆಯಲ್ಲಿ ಶೈವ ಧರ್ಮದ ಉಲ್ಲೇಖಗಳು ಕದಂಬರ ಕೆಲವು ಶಾಸನಗಳಲ್ಲಿ ದಾಖಲಾಗಿವೆ. ಗಂಗರ ಕಾಲ ಶೈವ ದೇವಾಲಯ ನಿರ್ಮಾಣದ ಆರಂಭದ ಕಾಲಘಟ್ಟವಾಗಿದೆ. ಹಾಸನ ಜಿಲ್ಲೆಯ ಶೈವ ಪಂಥದ ಬೆಳವಣಿಗೆಯಲ್ಲಿ ಕಲ್ಯಾಣ ಚಾಲುಕ್ಯರ ಕಾಲ ಮಹತ್ವದ್ದಾಗಿದೆ. ಆರನೇ ವಿಕ್ರಮಾದಿತ್ಯ, ಸೋಮೇಶ್ವರನ ಕಾಲದಲ್ಲಿ ಅವರ ಮಾಂಡಲಿಕರಾಗಿದ್ದ ಹೊಯ್ಸಳರ ಪ್ರೋತ್ಸಾಹದಿಂದ ಮತ್ತು ಶೈವಾಚಾರ್ಯರ ಆಗಮನಗಳಿಂದ ಈ ಪ್ರದೇಶದಲ್ಲಿ ದೇವಾಲಯ ಮತ್ತು ಮಠಗಳ ನಿರ್ಮಾಣಕಾರ್ಯ ವೇಗ ಪಡೆದುಕೊಂಡಿತ್ತು. ಹೊಯ್ಸಳರ ಆಡಳಿತದಲ್ಲಿ ಅಂದರೆ ಎರೆಯಂಗನಿಂದ ಮೂರನೇ ಬಲ್ಲಾಳನವರೆಗೂ ಶೈವ ಧರ್ಮ ತನ್ನ ಸುವರ್ಣಯುಗ ಕಂಡಿತ್ತು. ಧರ್ಮಸಹಿಷ್ಣುಗಳಾಗಿದ್ದ ಹೊಯ್ಸಳ ಅರಸರಲ್ಲಿ ಒಂದನೇ ಬಲ್ಲಾಳ, ವಿಷ್ಣುವರ್ಧನ, ಒಂದನೇ ನರಸಿಂಹ, ಎರಡನೇ ಬಲ್ಲಾಳ, ವೀರನರಸಿಂಹ, ಮೂರನೇ ಬಲ್ಲಾಳರು ಶೈವ ಧರ್ಮಕ್ಕೆ ನೀಡಿದ ಪ್ರೋತ್ಸಾಹ, ದೇವಾಲಯಗಳ

ನಿರ್ಮಾಣ, ದಾನ ದತ್ತಿಗಳು, ಜೊತೆಗೆ ಅವರ ಅಧಿಕಾರಿ ವರ್ಗದವರು, ಮಹಾರಾಣಿಯರು ಮತ್ತು ಸಾಮಾನ್ಯ ವರ್ಗದವರು ಶೈವ ಧರ್ಮಕ್ಕೆ ನೀಡಿದ್ದ ಕೊಡುಗೆಗಳ ಚಾರಿತ್ರಿಕ ಬೆಳವಣಿಗೆ ಇಲ್ಲಿನ ದೇವಾಲಯ ಮತ್ತು ಶಾಸನಗಳಲ್ಲಿ ದಾಖಲುಗೊಂಡಿದೆ. ಇಲ್ಲಿನ ಶೈವ ಧರ್ಮದ ಬೆಳವಣಿಗೆಯಲ್ಲಿ ವಿಜಯನಗರ ಅರಸರು ಮತ್ತು ಸ್ಥಳೀಯ ನಾಯಕ ಮನೆತನದವರ ಕೊಡುಗೆಗಳೂ ಪ್ರಧಾನವಾಗಿವೆ.

ಹಾಸನ ಜಿಲ್ಲೆಯಲ್ಲಿ ಪ್ರಾಚೀನ ಮತ್ತು ಮಧ್ಯಕಾಲೀನ ಕಾಲಘಟ್ಟದಲ್ಲಿದ್ದ ಧಾರ್ಮಿಕ ಸ್ವರೂಪ ಇಪ್ಪತ್ತೊಂದನೇ ಶತಮಾನದಲ್ಲಿನ ವೈಜ್ಞಾನಿಕ ಮತ್ತು ವೈಚಾರಿಕ ದೃಷ್ಟಿಕೋನಗಳಿಂದ ಬದಲಾಗಿದೆ ಎಂದೆನಿಸುವುದಿಲ್ಲ. ಹಾಸನ ಜಿಲ್ಲೆಯಲ್ಲಿ ಭಾರತದ ಪ್ರಾಚೀನ ಧರ್ಮಗಳಲ್ಲಿ ಒಂದಾದ ಶೈವ ಧರ್ಮವು ತನ್ನ ಹಲವು ಪಂಥಗಳಾದ ಪಾಶುಪತ(ಲಾಕುಳ), ಕಾಳಾಮುಖ, ಶುದ್ಧ ಶೈವ, ಕಾಶ್ಮೀರ ಶೈವ ಹಾಗೂ ತಾಂತ್ರಿಕ ಶೈವಗಳಾದ ಕಾಪಾಲಿಕ, ಕೌಳ, ಶಾಕ್ತ, ನಾಥ, ಭೈರವ ಮೊದಲಾದ ರೂಪದಲ್ಲಿ ಅಸ್ತಿತ್ವದಲ್ಲಿತ್ತು ಮತ್ತು ಅಸ್ತಿತ್ವದಲ್ಲಿದೆ. ಕ್ರಿ.ಶ. 12ನೇ ಶತಮಾನದ ಕರ್ನಾಟಕದ ಧರ್ಮವಾದ ಶರಣ(ಲಿಂಗಾಯತ) ಧರ್ಮದ ಪ್ರಭಾವವೂ ಇಲ್ಲಿದೆ. ಇಲ್ಲಿನ ಶೈವ ಧರ್ಮದ ಒಂದೊಂದು ಶಾಖೆಯ ಲಕ್ಷಣ ಮತ್ತು ಆಚರಣಾ ವಿಧಿಗಳು ವಿಭಿನ್ನವಾಗಿವೆ. ಇಲ್ಲಿನ ಶಾಸನಗಳು ಶೈವ ಧರ್ಮದ ಆಚರಣೆಗಳು ಮತ್ತು ಶೈವ ಧರ್ಮದ ಶಾಖೆಗಳ ಬೆಳವಣಿಗೆಯ ಚರಿತ್ರೆಯನ್ನು ಹಿಡಿದಿಟ್ಟುಕೊಂಡಿವೆ. ಲಾಕುಳರಿಗೆ ಸಂಬಂಧಿಸಿದ ಏಳು ಶಾಸನಗಳು ಮತ್ತು ಕಾಳಾಮುಖರ ಹನ್ನೆರಡು ಶಾಸನಗಳಲ್ಲಿ ದಾಖಲಾಗಿರುವ ಇಲ್ಲಿನ ಶೈವಾಚಾರ್ಯರು, ಯತಿಗಳು, ಸ್ಥಪತಿಗಳು, ಅವರಿಗೆ ನೀಡಲಾದ ದಾನ ದತ್ತಿಗಳು, ಅವರು ನಿರ್ಮಾಣ ಮಾಡಿಸಿದ ದೇವಾಲಯಗಳು, ಕಾಳಾಮುಖ ಯತಿಗಳ ಷಟ್ಕರ್ಮಾಚರಣೆಗಳು, ಪಾಂಡಿತ್ಯ, ಕಾಳಾಮುಖರ ಸಾಮಾಜಿಕ ಚಟುವಟಿಕೆಗಳ ಚರಿತ್ರೆ ವಿಶಿಷ್ಟವಾಗಿದೆ. ಕಾಳಾಮುಖ ಸನ್ಯಾಸಿನಿಯರು, ಕಾಪಾಲಿಕ, ಕೌಳ, ಶುದ್ಧ ಶೈವ, ಕಾಶ್ಮೀರ ಶೈವ, ಶರಣ ಧರ್ಮದ ಬೆಳವಣಿಗೆ, ಗಣಕುಮಾರಿತನ ಸೇರಿದಂತೆ ಅನೇಕ ವಿಚಾರಗಳು ಗಮನ ಸೆಳೆಯುತ್ತವೆ.

ಕರ್ನಾಟಕದಲ್ಲಿ ಕ್ರಿ.ಶ. 10–12ನೇ ಶತಮಾನದಲ್ಲಿ ನೆಲೆಸಿದ್ದ ಕಾಳಾಮುಖ ಯತಿಗಳ ಪ್ರಭಾವದಿಂದ ಇಲ್ಲಿನ ಪ್ರತಿ ಗ್ರಾಮದಲ್ಲೂ ಶಿವಾಲಯಗಳು ನಿರ್ಮಾಣವಾಗಿವೆ. ಹೀಗಾಗಿ ಹಾಸನ ಜಿಲ್ಲೆಯಲ್ಲಿ ನೂರಾರು ಶಿವಾಲಯಗಳು ಕಾಣಬರುತ್ತವೆ. ಇಲ್ಲಿನ ರಾಜಗುರುಗಳು ನೀಡಿದ ಪ್ರೇರಣೆ, ಪ್ರೋತ್ಸಾಹದಿಂದ ಭವ್ಯವಾದ ಶಿವಾಲಯಗಳು ನಿರ್ಮಾಣವಾಗಿವೆ. ಶಿವಾಲಯಗಳಲ್ಲಿನ ಭಿತ್ತಿ, ಕೋಷ್ಠ, ಸ್ತಂಭ ಮುಂತಾದ ಕಡೆಗಳಲ್ಲಿ ಶಿಲ್ಪಿಗಳು ಶಿವನ ಮತ್ತು ಅವನ ಪರಿವಾರ ದೇವತೆಗಳ ನಾನಾ ರೂಪದ ಶಿಲ್ಪಗಳನ್ನು ಭವ್ಯವಾಗಿ ಉತ್ಕೀರ್ಣಿಸಿದ್ದಾರೆ. ಶಿವನ ಮಹತ್ವವನ್ನು ತಿಳಿಸುವಂತೆ ಪ್ರಧಾನವಾಗಿ ಶಿವಲಿಂಗವು ಗರ್ಭಗೃಹದಲ್ಲಿ ಪ್ರತಿಷ್ಠೆಗೊಂಡಿದ್ದರೆ, ಶೈವ ಪುರಾಣ ಪ್ರಸಂಗಗಳು ಅನೇಕ ಶಿಲ್ಪಗಳ ರೂಪದಲ್ಲಿ ಇಲ್ಲಿನ ದೇವಾಲಯಗಳಲ್ಲಿ ಉತ್ಕೀರ್ಣಸಲ್ಪಟ್ಟಿವೆ.

ದೊಡ್ಡ ದೊಡ್ಡ ಧರ್ಮಗಳ ಜೊತೆಗೆ ಅನೇಕ ತಾಂತ್ರಿಕ ಮತಗಳು ಹಾಸನ ಪರಿಸರದಲ್ಲಿ ಪ್ರಚಲಿತದಲ್ಲಿದ್ದವು. ಸೌರ, ಗಾಣಪತ್ಯ, ಕೌಳ, ಶಾಕ್ತ, ಸಪ್ತಮಾತೃಕೆಯರನ್ನು ಆರಾಧಿಸುತ್ತಿದ್ದುದು ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಭೈರವ, ಮೈಲಾರ, ಸಿದ್ದೇಶ್ವರ, ವೀರಭದ್ರ ಮುಂತಾದ ದೇವತೆಗಳು ವಿಶೇಷವಾಗಿ ಆರಾಧನೆಗೊಳ್ಳುತ್ತಿದ್ದವು. ಮಹಾಕಾಳಿಯ ಜೊತೆಗೆ ಲಕ್ಷ್ಮಿಯನ್ನೂ ಪ್ರತಿಷ್ಠಾಪಿಸಿ ಪೂಜಿಸಲಾಗುತ್ತಿತ್ತು. ದೊಡ್ಡಗದ್ದವಳ್ಳಿಯ ಶಾಸನಗಳು ಶ್ರೀಮಹಾಲಕ್ಷ್ಮಿದೇವಿ, ಶ್ರೀಮಹಾಕಾಳಿದೇವಿ ಮತ್ತು ಭೂತನಾಥ ಈ ಮೂರು ದೇವತೆಗಳು ಒಟ್ಟಿಗೇ ಆರಾಧನೆಗೊಳ್ಳುತ್ತಿದ್ದುದನ್ನು ಉಲ್ಲೇಖಿಸುತ್ತವೆ. ಶೈವ ಧರ್ಮದ ಶಾಕ್ತ ಸಂಪ್ರದಾಯಕ್ಕೆ ಇದೊಂದು ವಿಶಿಷ್ಟ ನಿದರ್ಶನವಾಗಿದೆ. ಇಲ್ಲಿ ಸ್ತ್ರೀ ದೇವತೆಗೆ ಪ್ರತ್ಯೇಕ ದೇವಾಲಯಗಳು ನಿರ್ಮಾಣವಾಗುತ್ತಿದ್ದವು. ಆ ದೇವಿಯರಿಗೆ ಪ್ರಾಣಿಬಲಿಯನ್ನು ಕೊಡಲಾಗುತ್ತಿತ್ತು. ಏಕೆಂದರೆ, ಶೈವ ಸ್ತ್ರೀ ದೇವಾಲಯಗಳಲ್ಲಿ ಪ್ರಾಣಿಬಲಿ ಕಡ್ಡಾಯವಾಗಿತ್ತು. ಇದನ್ನು ಇಲ್ಲಿನ ಹಲವು ಶಾಸನಗಳು ಸ್ಪಷ್ಟಪಡಿಸುತ್ತವೆ.

ಸ್ತ್ರೀ ದೇವಿಪರ ಶಾಕ್ತ ಆಚರಣೆಗಳು ಕ್ರಿ.ಶ. 11–12ನೇ ಶತಮಾನಗಳ ಕಾಲಕ್ಕೆ ಹಾಸನ ಪರಿಸರದಲ್ಲಿ ವ್ಯಾಪಕವಾಗಿತ್ತು. ಶಾಕ್ತ ಪಂಥದ ಪ್ರಾಬಲ್ಯಕ್ಕೆ ಸ್ತ್ರೀ ದೇವತೆಯ ಪೂಜೆ ಪ್ರಧಾನವಾಗಿ ಯೋನಿ ಪೂಜೆಗೆ ಪ್ರಾಶಸ್ತ್ಯ ದೊರೆತಿದ್ದುದು ಸ್ವಾಭಾವಿಕ. ಎಲ್ಲಾ ಶಾಕ್ತ ಪಂಥಗಳೂ ತಮ್ಮ ಆರಂಭದ ಹಂತದ ಆಚರಣೆಗಳಲ್ಲಿ ಮಾತೃಪೂಜೆಗೇ ಪ್ರಾಧಾನ್ಯತೆಯನ್ನು ನೀಡಿದ್ದವು. ನಂತರ ಪುರುಷ ದೇವತೆಗಳು ಸ್ಥಾನ ಪಡೆದಿದ್ದವು. ಶಕ್ತಿ, ಶಾಕ್ತ ಪರಂಪರೆಯಲ್ಲಿ ಮಾತೃ ದೇವತೆಗಳೇ ಪ್ರಧಾನವಾಗಿವೆ. ಮಾತೃದೇವತೆಗಳ ರೌದ್ರತೆಗೆ ಸಹಜವಾಗಿ ಬಲಿ, ಮದ್ಯಪಾನ, ಯೋನಿಪೂಜೆ ಇತ್ಯಾದಿ ತಾಮಸಿಕ ಆರಾಧನಾ ವಿಧಿಗಳು ಆಚರಣೆಗೆ ಬಂದಿವೆ. ಮಾತೃಪೂಜೆಯಲ್ಲಿ ಸಪ್ತಮಾತೃಕೆಯರಿಗೆ ವಿಶೇಷ ಸ್ಥಾನವಿದೆ. ಹಾಸನ ಜಿಲ್ಲೆಯ ಬಹುತೇಕ ಶಿವಾಲಯಗಳಲ್ಲಿ 40ಕ್ಕೂ ಅಧಿಕ ಸಪ್ತಮಾತೃಕೆಯರ ಶಿಲ್ಪಗಳು ಕಂಡುಬರುತ್ತವೆ. ಇವರ ಜೊತೆಗೆ ರಕ್ಷಕರಾಗಿ ಭೈರವ ವೀರಭದ್ರ ಮತ್ತು ಗಣಪತಿಯರು ಇರುವುದು ಸಹಜ. ಸಪ್ತಮಾತೃಕೆಯರಿಗೆ ಪ್ರಾಣಿಬಲಿ ಇಲ್ಲ. ಆದರೆ ಅವರ ಕ್ಷೇತ್ರಪಾಲನಾದ ಭೈರವನಿಗೆ ಮಾತ್ರ ಪ್ರಾಣಿ ಬಲಿ ಇದೆ.

ಶಕ್ತಿ ದೇವತೆಯರಲ್ಲಿ ಕಾಳಿ ಮತ್ತು ಮಾತೃಕೆಯರ ಕ್ಷೇತ್ರಪಾಲ ಭೈರವನು ಮೊದಲಿನಿಂದಲೂ ವಿಶೇಷ ಸ್ಥಾನವನ್ನು ಗಳಿಸಿದ್ದನು. ಇವರಿಂದಲೇ ಕಾಳಾಮುಖ ಮತ್ತು ಕಾಪಾಲಿಕ ಎಂಬ ಪಂಥಗಳು ಹುಟ್ಟಿರುವ ಅನುಮಾನವಿದೆ. ಇವರಲ್ಲಿ ಕಾಳಿ ಪ್ರಾಣಿ ಬಲಿ ಬಯಸುವುದಿಲ್ಲ. ಭೈರವನಿಗೆ ಪ್ರಾಣಿ ಬಲಿ ಇದೆ. ಹಾಸನ ಪರಿಸರದ ಭೈರವ ಆರಾಧನೆಯನ್ನು ಗಮನಿಸಿದರೆ ಇಲ್ಲಿ ನರಬಲಿಯೂ ಇದ್ದಂತೆ ಕಾಣುತ್ತದೆ. ಹಾಸನ ಜಿಲ್ಲೆಗೆ ಸಂಬಂಧಿಸಿದ ಧಾರ್ಮಿಕ ವಲಸೆಯಲ್ಲಿ ಪಾಂಡ್ಯ ನಾಡಿನಿಂದ ಶೈವ ಧಾರ್ಮಿಕ ಗುರು ಮಾರಜೀಯನ ನೇತೃತ್ವದಲ್ಲಾದ ವಲಸೆ ಹೆಚ್ಚು ಗಮನಾರ್ಹವಾದದ್ದು. ಅವನೊಂದಿಗೆ ಕೆಸೂರ ಮೆದಕೇರಿಯಿಂದ ಇಡೀ ಗ್ರಾಮವೇ (ಗಾವುಂಡುಗಳು, ಪ್ರಜೆಗಳು) ಗುಳೆ ಹೊರಟು ಹಾಸನ ಜಿಲ್ಲೆಯ ಮುತ್ತನಹೊಸವೂರಿನಲ್ಲಿ ನೆಲೆಸಿದ್ದು

ವಿಶಿಷ್ಟ ವಲಸೆಯಾಗಿದೆ. ಶೈವ ಧಾರ್ಮಿಕ ಗುರುವಿನಿಂದಾದ ಈ ವಲಸೆ ಹಾಸನ ಪ್ರದೇಶದಲ್ಲಿನ ಧಾರ್ಮಿಕ ವಿಸ್ತರಣೆಯ ಹೊಸ ಮಜಲಾಗಿದೆ. ಇಂತಹ ಶೈವಾಚಾರ್ಯರ ಪ್ರೇರಣೆಯಿಂದಲೇ ಮುತ್ತನಹೊಸವೂರು, ಅರಕೆರೆ, ಬೆಂಡೆಕೆರೆ ಸೇರಿದಂತೆ ಅನೇಕ ಸ್ಥಳಗಳಲ್ಲಿ ಅನೇಕ ಶಿವಾಲಯಗಳ ಜೊತೆಗೆ ಕೆರೆಕಟ್ಟೆಗಳು ನಿರ್ಮಾಣವಾಗಿವೆ. ಹೀಗೆ ವಲಸೆ ಬಂದಿದ್ದವರಲ್ಲಿ ಕಂಡನಂಬಿಯ ಕುಟುಂಬದವರು ಪ್ರಮುಖರು.

ಈ ಶೈವ ಧರ್ಮಾನುವಾಯಿಗಳು ಬಸವ ಅಥವಾ ಲಿಂಗಾಯತ ಧರ್ಮಕ್ಕೆ ಪರಿವರ್ತನೆ ಹೊಂದಿದ ಮೇಲೆ ಸ್ತ್ರೀಯರಿಗೂ ಧಾರ್ಮಿಕ ಆಡಳಿತ ನೀಡುವಂತಹ ಮಹತ್ತರ ಕಾರ್ಯ ನಡೆದಿತ್ತು. ಚಂದವ್ವೆಗೆ ವಿಭೂತಿ ಪಟ್ಟ ಕಟ್ಟಿ ಗಣಕುಮಾರಿತನ ನೀಡಿ ಕುಂಜೇಶ್ವರ ದೇವಾಲಯದ ಆಡಳಿತ ಮತ್ತು ಅಲ್ಲಿನ ಮಠದ ಪೂರ್ಣ ಜವಾಬ್ದಾರಿ ನೀಡಿದ್ದುದು ಈ ಹಿನ್ನೆಲೆಯ ಗಮನಾರ್ಹ ಸಂದರ್ಭ. ಕೇರಳದಿಂದ ಬಂದ ಮಲೆಯಾಳಿಗಳು ಬೇರೆ ಭಾಷೆಯ ಪರಿಸರದಲ್ಲಿ ನೆಲೆಸಿದ್ದರೂ ತಮ್ಮ ಮೂಲ ಸಂಸ್ಕೃತಿಯನ್ನು ಬಿಡದೆ ಈ ಪರಿಸರದಲ್ಲಿ ಅಳಿಯ ಸಂತಾನ ಪದ್ಧತಿಯನ್ನು ಮುಂದುವರೆಸಿಕೊಂಡು ಬಂದಿದ್ದರು. ಮುತ್ತನಹೊಸವೂರು ಶಿವಾಲಯಗಳಿಂದ ತುಂಬಿತ್ತು. ಶರಣ ವಿಚಾರಗಳ ವಾತಾವರಣವಿದ್ದ ಮುತ್ತನಹೊಸವೂರನ್ನು ಶಿವಪುರವಾಗುವ ಸಾಧ್ಯತೆಯನ್ನು ತಪ್ಪಿಸಿ ಕಂಡನಂಬಿಸೆಟ್ಟಿ, ಮುತ್ತನಹೊಸವೂರನ್ನು ಅಗ್ರಹಾರವನ್ನಾಗಿ ಮಾಡಿದ್ದು ಕಂಡನಂಬಿಸೆಟ್ಟಿಯ ಧಾರ್ಮಿಕ ಚಾಣಾಕ್ಷತೆಯಾಗಿತ್ತು. ಆದರೆ, ಅಲ್ಲಿನ ಕುಂಜೇಶ್ವರ ದೇಗುಲದ ಆರ್ಥಿಕ ನಿರ್ವಹಣೆಯನ್ನು ತನ್ನ ಮಗಳು ಚಂದವ್ವೆಗೆ ವಹಿಸಿದ್ದು ಅವನ ವ್ಯಾವಹಾರಿಕ ಚಾಣಾಕ್ಷತೆಯಾಗಿತ್ತು.

ಹಾಸನ ಜಿಲ್ಲೆಯಲ್ಲಿ ಕಂಡುಬರುವ ಶಿವಶರಣರ ಚರಿತ್ರೆ ಇನ್ನೂ ನಿಗೂಢವಾಗಿದೆ. ಶೈವ ಧರ್ಮದ ಇತಿಹಾಸದ ಬುನಾದಿಯಲ್ಲಿ ತನ್ನ ಬೇರನ್ನು ಊರಿನಿಂತ ಈ ಶರಣ ಪರಂಪರೆ ಹಾಸನ ಪರಿಸರದಲ್ಲಿ ವ್ಯಾಪಿಸಿತು. ಈ ಶರಣ ಸಮೂಹಕ್ಕೆ ಹಲವು ನೂರು ವರ್ಷಗಳ ಇತಿಹಾಸವಿದೆ. ಅಂದರೆ ತಮ್ಮ ಹಿಂದೆ ಇದ್ದ ಜೇಡರ ದಾಸಿಮಯ್ಯನ ಜೊತೆಗೆ ಕ್ರಿ.ಶ. 12ನೇ ಶತಮಾನದಲ್ಲಿ ಶರಣ ಧರ್ಮಕ್ಕೆ ಶಾಶ್ವತ ಮುದ್ರೆಯನ್ನೊತ್ತಿದ ಬಸವಾದಿ ಪ್ರಮಥರು, ಹದಿನೈದನೇ ಶತಮಾನದ ನೂರೊಂದು ವಿರಕ್ತರು ಹಾಗೂ ಹದಿನಾರನೆಯ ಶತಮಾನದ ಏಳುನೂರೊಂದು ವಿರಕ್ತರಿಂದ ಪೋಷಣೆಗೊಳ್ಳುತ್ತಾ ಬಂದಿದೆ. ಹಾಸನ ಜಿಲ್ಲೆಯ ಶರಣ ಸಂಪ್ರದಾಯದ ಚರಿತ್ರೆ ವಿಶೇಷವಾಗಿದೆ.

ಹಾಸನ ಜಿಲ್ಲೆಯಲ್ಲಿ ಪ್ರಾಚೀನ ಕರ್ನಾಟಕದ ಮಹಿಳೆಯರು ಧಾರ್ಮಿಕ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆಯನ್ನು ಮಾಡಿದ್ದಾರೆ. ಈ ಪ್ರಾಂತ್ಯದ ಮುಗರೆ ಮುನ್ನೂರು. ನೀಗುಂದ, ಆಸಂದಿ, ಕೆಂಬಾಳು, ಅಣಿಗನಹಳ್ಳಿ, ಕಿತ್ತನಕೆರೆ ಸೇರಿದಂತೆ ಅನೇಕ ಕಡೆ ಹೊಯ್ಸಳ ರಾಣಿಯರ ಆಳ್ವಿಕೆ ವಿಶೇಷವಾಗಿತ್ತು. ಇಲ್ಲಿನ ರಾಣಿಯರಿಂದ ಹಿಡಿದು ಸಾಮಾನ್ಯ ಮಹಿಳೆಯರೂ ಸಹ ಶಿವಾಲಯಗಳ ನಿರ್ಮಾಣ

ಮಾಡಿಸಿ, ಅವುಗಳ ನಿರ್ವಹಣೆಗೆ ಅತಿ ಹೆಚ್ಚಿನ ದಾನ ದತ್ತಿಗಳನ್ನು ನೀಡಿದ್ದರು. ಅವರಲ್ಲಿ ಕೆಲವರು ದೇವಾಲಯ ಮಠಗಳ ಒಡತಿಯರಾಗಿ, ಗಣಕುಮಾರಿಯರಾಗಿ, ಸ್ಥಾನಿಕ ಸ್ತ್ರೀಯರಾಗಿ, ಪೂಜಾರಿಣಿಯರಾಗಿ, ಕಾಳಾಮುಖ ಸನ್ಯಾಸಿನಿಯರಾಗಿ, ಪಾತರದವರಾಗಿ, ಬಾಣಸುಗಿತ್ತಿ, ಮಾಲೆಕಾರ್ತಿ, ತೈಲಗಿತ್ತಿಯರಾಗಿ ಗೃಹ ಜೀವನದ ಹೊರಗೂ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಶೈವ ಧರ್ಮದ ಬೆಳವಣಿಗೆಗೆ ಅಮೂಲ್ಯ ಕೊಡುಗೆ ನೀಡಿದ್ದರು.

ಹಾಸನ ಜಿಲ್ಲೆಯ ಶೈವ ಧರ್ಮದ ಬೆಳವಣಿಗೆಯಲ್ಲಿ ಮಠಗಳ ಪಾತ್ರ ಮಹತ್ವದ್ದಾಗಿದೆ. ಅದರಲ್ಲೂ ಕಾಳಾಮುಖ ಮತ್ತು ಲಿಂಗಾಯತ ಧರ್ಮವೆಂಬ ಪ್ರಭೇಧಗಳಲ್ಲಿ ಮಠಮಾನ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಿರುವುದು ಕಂಡುಬರುತ್ತದೆ. ಹಾಸನ ಜಿಲ್ಲೆಯ ಕ್ರಿ.ಶ. 11–12ನೇ ಶತಮಾನಗಳಲ್ಲಿ ಕಾಳಾಮುಖ ಶೈವ ಹಾಗೂ ಶರಣರ ವಿರಕ್ತ ಮಠಗಳ ಪ್ರಭಾವ ಇರುವುದು ಇಲ್ಲಿನ ಶಾಸನಗಳಲ್ಲಿ ಕಂಡುಬರುತ್ತದೆ. ಕ್ರಿ.ಶ. 1095–96ರ ನಿಟ್ಟೂರು ಶಾಸನ, ಕ್ರಿ.ಶ. 1170–71ರ ಜಕ್ಕೇನಹಳ್ಳಿ ಶಾಸನ, ತರಿಗಳಲೆ ಶಾಸನಗಳಲ್ಲಿ ಕಾಳಾಮುಖ ಮಠ ಹಾಗೂ ಅವುಗಳಿಗೆ ಹೊಂದಿಕೊಂಡ ದೇಗುಲಗಳಿಗೆ ದಾನ ನೀಡಿರುವ ಅಂಶಗಳು ಮತ್ತು ಶೈವ ಯತಿಗಳ ಮಾಹಿತಿಗಳು ದೊರಕುತ್ತವೆ. ಕ್ರಿ.ಶ. 12ನೇ ಶತಮಾನದ ಜಾಜೂರು, ಕೋಳಗುಂದ, ದ್ಯಾವೇನಹಳ್ಳಿ, ಯಡವನಹಳ್ಳಿ ಶಾಸನಗಳು ಮಾಹೇಶ್ವರರ ಹಾಗೂ ಕಾಳಾಮುಖ ಯತಿಗಳ ಮಠಗಳ ಪ್ರಭಾವ, ಕಲಿದೇವರ ಗುಡಿಗಳ ಅಸ್ತಿತ್ವ ಹಾಗೂ ಭೈರವಾರಾಧನೆಯ ಸಂಗತಿಗಳನ್ನು ತಿಳಿಸುತ್ತವೆ. ಇವೆಲ್ಲಾ ಮುಂದೆ ವಿರಕ್ತ ಮಠಗಳಾದಂತೆ ತೋರುತ್ತದೆ. ಶರಣ ಸಂಪ್ರದಾಯದಲ್ಲಿ ಅದರಲ್ಲೂ ಶ್ರೀಶೈಲ ಪೀಠದ ಶಿಷ್ಯ ಪರಂಪರೆಯ ದೇವರ ದಾಸಿಮಯ್ಯಗೆ ಅನ್ವಯವಾಗುವ ಅಂಕನಾಥಪುರದ ಶಾಸನ ಗಮನಾರ್ಹವಾಗಿದೆ. ಈ ಶಾಸನದಲ್ಲಿ ಶರಣರ ಪಾರಿಭಾಷಿಕ ಶಬ್ದಗಳಾದ ಶೀಲಾಚಾರ, ಗಣಗಳು ಹಾಗೂ ದೇವರ ದಾಸಿಮಯ್ಯನ ಹೆಸರು ಇರುವುದು ಗಮನಾರ್ಹವಾಗಿದೆ.

ಹೊಳೆನರಸೀಪುರದ ಕ್ರಿ.ಶ. 1248ರ ತವನಂದಿ ಶಾಸನದಲ್ಲಿ ತವನಿಧಿ ಶಬ್ದ ಶಾಸನೋಕ್ತವಾಗಿದೆ. ಇದರಿಂದ ದೇವರ ದಾಸಿಮಯ್ಯನಿಗೆ ಅನೇಕ ಸಂಗತಿಗಳು ತಿಳಿದುಬರುತ್ತವೆ. ಒಟ್ಟಿನಲ್ಲಿ ಹಾಸನ ಜಿಲ್ಲೆಯಲ್ಲಿ ಶರಣ ಧರ್ಮದ ಬೆಳವಣಿಗೆ ಮತ್ತು ಮಠಗಳ ಬೆಳವಣಿಗೆಗೆ ಶ್ರೀಶೈಲ ನಿಡುಮಾಮಿಡಿ ಪೀಠದ ಶಿಷ್ಯನಾದ ದೇವರ ದಾಸಿಮಯ್ಯನ ಪ್ರಭಾವ ಹೆಚ್ಚಿತ್ತು. ಕೇರಳಾಪುರ ಶಾಸನದ ನಂಬಿಯಣ್ಣಗಳ ಗಣ ಎಂಬ ಶಬ್ದಗಳನ್ನು ಗಮನಿಸಿದರೆ ಈ ಪ್ರದೇಶದಲ್ಲಿ ಪ್ರಚಲಿತವಿದ್ದ ಶರಣರ ಗಣ ಸಂಪ್ರದಾಯದ ಕುರಿತು ಅನೇಕ ಮಾಹಿತಿ ದೊರಕುತ್ತವೆ. ತಳಲತೊರೆಯ ಶಾಸನ ಶಿವಶರಣ ದೀಕ್ಷಾಪುತ್ರನು ಶಿವದೀಕ್ಷಿತನಾಗಿ ಹೊಯ್ಸಳ ದಂಡನಾಯಕನೆದುರು ವೀರಸ್ವರ್ಗ ಸೇರಿದ್ದನ್ನು ತಿಳಿಸುತ್ತದೆ. ಹಾಸನ ಜಿಲ್ಲೆಯ ಶರಣ ಸ್ತಲದ ಮಠಗಳನ್ನು ಗಮನಿಸಿದರೆ ಕಾಳಾಮುಖ ಶೈವ ಪರಿಸರದಲ್ಲಿ ಶರಣ ಧರ್ಮ ಬೆಳವಣಿಗೆ ಹೊಂದಿರುವುದು ಕಂಡುಬರುತ್ತದೆ. ಶರಣರ ಗುರು, ವಿರಕ್ತ ಪರಂಪರೆಯ ಸಮನ್ವಯ ಇಲ್ಲಿ ಕಂಡುಬಂದಿದೆ. ಇಲ್ಲಿನ ವಿರಕ್ತಮಠದ ಆಚರಣೆಗಳು ದೇಗುಲಗಳನ್ನು

ಒಳಗೊಂಡು ಜನಪದ ಸಂಸ್ಕೃತಿಯೊಂದಿಗೆ ಮಿಳಿತವಾಗಿವೆ. ಇಲ್ಲಿ ಹಲವು ಗುರುಸ್ಥಲದ ಮಹಾಮಹತ್ತಿನ ಮಠಗಳಿವೆ.

ಮಹಾಮಹತ್ತು ಎಂದರೆ ಸಿಂಹಾಸನ ಪೀಠಗಳಿಗೆ ಅನ್ವಯವಾಗುವಂತಹವು. ಇವು ಸಿದ್ಧ ಸಂಪ್ರದಾಯವನ್ನು ಐಕ್ಯ ಮಾಡಿಕೊಂಡ ಕಾರಣ, ಸಿದ್ದೇಶ್ವರ ದೇಗುಲಗಳು ವಿರಕ್ತ ಮಠಗಳಿಗೂ ಹೊಂದಿಕೊಂಡು ಬಂದಂತೆ ಕಾಣುತ್ತದೆ. ಒಟ್ಟಿನಲ್ಲಿ ಇಂದಿನ ಸಾಮಾಜಿಕ ಬದಲಾವಣೆಗೆ ಅನುಸಾರವಾಗಿ ಮಠಗಳು ಸ್ಪಂದಿಸುತ್ತಾ ಬಂದಿದ್ದು ಧಾರ್ಮಿಕ ಕಾರ್ಯಗಳ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಿಕೊಂಡು ನಡೆಯುತ್ತಿವೆ. ಮಾಹೇಶ್ವರ ಜಂಗಮ ಜಾತ್ರೆಗಳು, ಸುಗ್ಗಿಕಟ್ಟೆ ಹಬ್ಬಗಳು, ಹರಿಜನರಿಗೆ ದೀಕ್ಷೆ ನೀಡುವುದು ಹಾಗೂ ಅವರನ್ನು ಯಾವುದೇ ಜಾತಿ ಭೇದವಿಲ್ಲದೆ ತಮ್ಮ ಆಚರಣೆಗಳಲ್ಲಿ ತೊಡಗಿಸಿಕೊಳ್ಳುವ ಪ್ರಕ್ರಿಯೆಗಳು ಈ ಭಾಗದಲ್ಲಿ ನಡೆಯುತ್ತಿವೆ. ಕೆಲವು ಮಠಗಳಲ್ಲಿ ಸ್ವಾಮೀಜಿಗಳಿದ್ದರೆ, ಇನ್ನೂ ಕೆಲವೆಡೆ ಜಂಗಮರು, ಸಂಸಾರಿಗಳು ಮಠಗಳನ್ನು ನಿರ್ವಹಿಸುತ್ತಿದ್ದಾರೆ. ಹಾಸನ ಜಿಲ್ಲೆಯಲ್ಲಿ ಒಟ್ಟು 108 ಮಠಗಳ ಪೈಕಿ ಇಂದು ಅದರ ಅರ್ಧದಷ್ಟು ಮಾತ್ರ ಉಳಿದುಕೊಂಡಿವೆ. ಅವುಗಳ ಉಳಿಯುವಿಕೆ ಮತ್ತು ಅಳಿಯುವಿಕೆಗೆ ಹಲವು ಕಾರಣಗಳಿವೆ.

ಹಾಸನ ಜಿಲ್ಲೆಯ ದೇವಾಲಯಗಳು ಎಲ್ಲಾ ವೃತ್ತಿಯವರು, ವರ್ಗಗಳವರು ಸೇರುವ ಸ್ಥಳಗಳಾಗಿದ್ದವು. ಮಹಾಜನರು, ಸ್ಥಾನಾಚಾರ್ಯರು, ಪ್ರಭುಗಳು, ಊರಗಾವುಂಡಗಳು ಮತ್ತು ವಿವಿಧ ವೃತ್ತಿಗಳವರು ದೇವಾಲಯಗಳಿಗೆ ಒಟ್ಟಾಗಿ ಸೇವೆ ಸಲ್ಲಿಸಿದ್ದಾರೆ; ಅನೇಕ ದಾನಗಳಿಗೆ ಸಾಕ್ಷಿಗಳಾಗಿದ್ದಾರೆ. ಗವರೆಗಳು (ವೀಳೆದೆಲೆ ವ್ಯಾಪಾರಸ್ಥರು), ಗಾತ್ರಿಗಳು, ವೇಳೆಕಾರರು, ಬೀರರು, ಬೀರವಣಿಗರು, ಗಾವುಂಡರು ಗಾವುಂಡ ಸ್ವಾಮಿಗಳು, ವೀರಬಳಂಜುಗಳು, ತೆಲ್ಲಿಗರು, ಉಗುರರು, ಅರವತ್ತೊಕ್ಕಲು, ಎಕ್ಕಟಿಗರು, ನಖರರು, ಮುಮ್ಮರಿದಂಡಗಳು, ಸೆಟ್ಟಿಗರು, ಸೆಟ್ಟಿಗುತ್ತರು, ನಾನಾದೇಶಿಗಳು, ಕೊಯ್ಲಾಳ್ಗಳು, ಮೇಳಿಸಾಸಿರ್ವರು, ನೇಯ್ಗೆಕಾರರು, ಸೂಜಿದಾರರು ಅಥವಾ ಹೊಲಿಗೆಗಾರರು, ಮಾಲೆಗಾರರು, ಪಾಂಚಾಲರು, ಎಕ್ಕಟಿಗರು, ಮೆಯಿಮೆಟ್ಟಿಗರು ಹೀಗೆ ಎಲ್ಲಾ ವೃತ್ತಿಯ ವರ್ಗದ ಜನರು ಪ್ರತ್ಯೇಕವಾಗಿ ಅಥವಾ ಒಟ್ಟಾಗಿ ದೇವಾಲಯ ನಿರ್ಮಾಣ ಮತ್ತು ಪೋಷಣೆಗೆ ದಾನ-ಧರ್ಮ ಮಾಡಿದ್ದಾರೆ. ದೇವಸ್ಥಾನಗಳು ಯಾರೊಬ್ಬರಿಗೂ ಮಾತ್ರ ಸೇರದೆ ಎಲ್ಲ ಜನರಿಗೂ ಸೇರಿದ್ದು ಅದರ ಜವಾಬ್ದಾರಿಗಳನ್ನು ಎಲ್ಲರೂ ನಿರ್ವಹಿಸುತ್ತಿದ್ದರು. ದೇವಾಲಯಗಳು ಎಲ್ಲರನ್ನೂ ಒಂದುಗೂಡಿಸಿದಂತೆ, ಒಂದುಗೂಡಿದ ಜನರಿಂದ ಅಪಾರ ಸೇವೆಯನ್ನು ಪಡೆದಿವೆ. ವಿದ್ಯಾದಾನ ಕೇಂದ್ರಗಳಾಗಿ, ಅನ್ನದಾನ ಕೇಂದ್ರಗಳಾಗಿ, ಸತ್ರಗಳಾಗಿ ಅರವಟ್ಟಿಗೆಗಳಾಗಿ, ಭೈಷಜ್ಯ ಸ್ಥಾನಗಳಾಗಿ ನ್ಯಾಯಸ್ಥಾನಗಳಾಗಿ, ಆರ್ಥಿಕ ಸಹಾಯ ಕೇಂದ್ರಗಳಾಗಿ ಅಪರಿಮಿತ ಸೇವೆಯನ್ನು ಸಲ್ಲಿಸಿವೆ.

ನೈಷ್ಠಿಕ ಸ್ಥಾನಾಚಾರ್ಯರ ಕಟ್ಟುಪಾಡುಗಳು, ಶ್ರೀಮಂತರ ಮತ್ತು ಅಧಿಕಾರಿಗಳ ಪೋಷಣೆಯಲ್ಲಿ ಬೆಳೆಯುತ್ತಿದ್ದ ದೇವಾಲಯಗಳ ಡಾಂಭಿಕತನದಿಂದ

ಅಸಮಾಧಾನಗೊಂಡ ಶೈವರು

**ಉಳ್ಳವರು ಶಿವಾಲಯ ಮಾಡುವರು,**
**ನಾನೇನು ಮಾಡಲಿ ಬಡವನಯ್ಯಾ?**
**ಎನ್ನ ಕಾಲೇ ಕಂಬ, ದೇಹವೇ ದೇಗುಲ,**
**ಶಿರವೇ ಹೊನ್ನ ಕಳಶವಯ್ಯಾ**
**ಕೂಡಲಸಂಗಮದೇವಾ, ಕೇಳಯ್ಯಾ**
**ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ**

ಬಸವಣ್ಣನ ಈ ವಚನವನ್ನು ಸಾಕಾರಗೊಳಿಸಲೆಂಬಂತೆ, ನೆಲೆ(ಸ್ಥಿರ) ದೇಗುಲಗಳನ್ನು ಒಪ್ಪದೆ, ಪ್ರತಿಯೊಬ್ಬ ಜೀವಂತ ವ್ಯಕ್ತಿಯೂ ಒಂದೊಂದು ದೇಗುಲದಂತೆ ಅವನೇ ನಡೆ(ಚರ)ದೇಗುಲ ಎಂಬ ಪರಿಕಲ್ಪನೆಯಿಂದ ಜಂಗಮ ಲಿಂಗದ ಪೂಜೆಗೆ ತೊಡಗಿ ಶರಣರಾದದ್ದು ಹಾಸನ ಪರಿಸರದ ಸಾಂಸ್ಕೃತಿಕ ಚರಿತ್ರೆಯಲ್ಲಿ ಬಹಳ ಮುಖ್ಯವಾದ ಸಂದರ್ಭವಾಗಿದೆ.

ಹುಲಿಕೆರೆಯ ಒಂದು ಶಾಸನವು 'ನಡೆ ದೇಗುಲ' ಮತ್ತು 'ನೆಲೆ ದೇಗುಲ'ಗಳನ್ನು ಪ್ರಸ್ತಾಪಿಸಿದೆ. ಪುಟ್ಟಿದ ಪೊನ್ನಿರದೆಂತುಂ ಕಟ್ಟಿಪುದದಂದೆ ಕೆಜಯಮುಮುಂ ದೇಗುಲಮಂ ಎಂಬ ನಿರ್ಧಾರದಿಂದ ಚಟ್ಟನು ಶಿವ ದೇವಾಲಯ ನಿರ್ಮಾಣ ಮಾಡಿಸಿದ್ದನ್ನು ತಿಳಿಸುವ ಶಾಸನವು ಚಟ್ಟನನ್ನು 'ಪಲರಂ ರಕ್ಷಿಸಿ ಮತ್ತಂ ಪಲವಂ ನಡೆದೇಗುಲಂಗಳಂ ಮಾಡಿಸಿದಂ ನೆಲನೆಲ್ಲಮಯೆ ಚಟ್ಟ ನೆಲೆದೇಗುಲ ಮುಮುದಿದೊಂದನೊಲ್ಲೆತ್ತಿಸಿದಂ' ಎಂದು ಹೊಗಳಿದೆ. ಚಟ್ಟನು ತಾನು ರಕ್ಷಿಸಿದವರೆಲ್ಲರನ್ನೂ ನಡೆದೇಗುಲಗಳು ಎಂದೇ ಭಾವಿಸಿದ್ದಾನೆ. ನಿರ್ಮಿಸಿದ 'ನೆಲೆದೇಗುಲ' ಮಾತ್ರ ಒಂದೇ ಒಂದು. ಅದೂ ಅವನು ಉಳ್ಳವರ ಗುಂಪಿನಲ್ಲಿ ಒಬ್ಬನಾದುದರಿಂದ. ಇಲ್ಲಿ ನೆಲೆ ದೇಗುಲ ಮತ್ತು ನಡೆ ದೇಗುಲಗಳ ಅರ್ಥ ಸ್ಪಷ್ಟವಾಗಿದೆ.

ಜನತೆಯ ಪೋಷಣೆಯಿಂದ, ಜನತೆಯನ್ನು ಪೋಷಿಸುತ್ತಾ ಬೆಳೆದ ಶೈವ ಧರ್ಮ ಶಿವ ದೇವಾಲಯಗಳ ಮೂಲಕ ಆಚಾರ್ಯರ ಕೈಗಳಲ್ಲಿ ಮಡಿವಂತಿಕೆಯನ್ನು ಪಡೆಯಿತು. ಧನ ಉಳ್ಳವರು ಶಿವಾಲಯವನ್ನು ಮಾಡುತ್ತಾ ನೆಲೆದೇಗುಲಗಳು ಹೆಚ್ಚಾದಾಗ ಧನವಿಲ್ಲದ ಶಿವ ಭಕ್ತರೇ ನಡೆದೇಗುಲಗಳಾಗಿ ಬೆಳೆದರು. ಇದೇ ಶರಣ ಧರ್ಮದ ಮತ್ತೊಂದು ಕ್ರಾಂತಿ. ಧನಿಕ–ಬಡವ, ಕಾಠಿಣ್ಯ–ಮೃದುತೆ, ಆಚಾರ ವ್ಯವಹಾರಗಳ ಕಟ್ಟುಪಾಡು, ಸರಳತೆ ಇತ್ಯಾದಿಗಳ ಘರ್ಷಣೆ ಹೆಚ್ಚಾಗಿದ್ದರ ಫಲವಾಗಿಯೇ 12ನೇ ಶತಮಾನದ ಕಾಲಘಟ್ಟದಲ್ಲಿ ಶರಣ ಧರ್ಮವು ಶೈವ ಧರ್ಮದ ಹಿನ್ನೆಲೆಯಲ್ಲಿ ಸಾಮಾನ್ಯ ಜನತೆಯ ಆಶೋತ್ತರಗಳನ್ನು ಈಡೇರಿಸಲು ರೂಪುಗೊಂಡಿತು. ಇದು ವೇದ ವಿರೋಧಿಯಾಗಿತ್ತು ಎನ್ನುವುದಕ್ಕಿಂತ ವೈದಿಕ ಆಚರಣೆಗಳನ್ನು ಮತ್ತು ಅದರ ಡಾಂಭಿಕತೆಯನ್ನು ಒಪ್ಪಲಿಲ್ಲ ಎನ್ನುವುದು ಸೂಕ್ತ. ರಾಜಾಶ್ರಯದಿಂದ ವಂಚಿತವಾಗಿ ದುರ್ಬಲಗೊಳ್ಳುತ್ತಿದ್ದ ಜೈನ ಧರ್ಮ ಮತ್ತೆ

ಪ್ರಬಲವಾಗಲು ಪ್ರಯತ್ನಿಸುತ್ತಿದ್ದ ಸಂದರ್ಭದಲ್ಲಿ ರಾಜಾಶ್ರಯದ ಹಿಗ್ಗಿನಲ್ಲಿ ಜನಸಾಮಾನ್ಯರಿಂದ ದೂರವಾಗುತ್ತಿದ್ದ ಶೈವರಲ್ಲೇ ಭಿನ್ನಮತೀಯರಾಗಿ ಶರಣರು ಕಾಣಿಸಿಕೊಳ್ಳುತ್ತಾರೆ.

ಸ್ವಮತಾಭಿಮಾನದ ಸಂದರ್ಭದಲ್ಲಿ ಅನ್ಯಮತದ ತೆಗಳಿಕೆ, ಮತೀಯ ಸೌಹಾರ್ದತೆ ಎರಡಕ್ಕೂ ಹಾಸನ ಜಿಲ್ಲೆಯಲ್ಲಿ ಶಾಸನೋಲ್ಲೇಖಗಳು ದೊರೆಯುತ್ತವೆ. ಇದಕ್ಕೆ ಪೂರಕವಾಗಿ ಸಮಕಾಲೀನ ಸಾಹಿತ್ಯವೂ ನೆರವಾಗುತ್ತವೆ. ಮತೀಯ ವಿಡಂಬನೆ, ತೆಗಳಿಕೆ, ಸೌಹಾರ್ದತೆ, ಸಹಿಷ್ಣುತೆ ಇವೆಲ್ಲದಕ್ಕೂ ದೇವಾಲಯಗಳೇ ಮೂಲ ಸ್ಥಾನಗಳಾಗಿದ್ದುದು ಸ್ಪಷ್ಟವಾಗಿದೆ. ಕೇವಲ ದೇವಸ್ಥಾನವಾಗಿ ಮಾತ್ರವೇ ಅಲ್ಲದೆ ಅನ್ನದಾನ ಮತ್ತು ವಿದ್ಯಾದಾನದ ಕೇಂದ್ರಗಳೂ ಆಗಿ ಕಾರ್ಯ ನಿರ್ವಹಿಸಿದ ಇಲ್ಲಿನ ದೇವಾಲಯಗಳು ಧಾರ್ಮಿಕ ಸ್ಥಿತ್ಯಂತರಕ್ಕೆ ಕಾರಣವಾದವು. ಪರಸ್ಪರ ರಕ್ಷಿಸಿಕೊಳ್ಳುತ್ತಿದ್ದೇವೆ ಎಂಬ ಭ್ರಮೆಯಲ್ಲಿ ಇಲ್ಲಿನ ದೇವಾಲಯ ಮತ್ತು ಧರ್ಮಗಳು ಹೊಸ ಸಂಪ್ರದಾಯಗಳ ಹುಟ್ಟಿಗೆ ಕಾರಣವಾಗಿವೆ.

**ಪರಾಮರ್ಶನ ಗ್ರಂಥಗಳು:**

1. ಗೊರೂರು ರಾಮಸ್ವಾಮಿ ಅಯ್ಯಂಗಾರ್, (1996), ಹಾಸನ ಜಿಲ್ಲಾ ದರ್ಶನ, ಬೆಂಗಳೂರು: ಐಬಿಎಚ್ ಪ್ರಕಾಶನ.
2. ಗೊರೂರು ಅನಂತರಾಜು, (2008), ಹಾಸನ ಜಿಲ್ಲೆಯ ದೇವಾಲಯ ದರ್ಶನ, ಹಾಸನ: ವಾಸ್ತುಶಾಸ್ತ್ರ ಪೇಂಟಿಂಗ್ ಕಲೆ.
3. ಗೋಪಾಲ ಆರ್., (2010), ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಮೈಸೂರು: ಪ್ರಾಚ್ಯವಸ್ತು ಸಂಗ್ರಹಾಲಯಗಳ ಇಲಾಖೆ.
4. ಮಳಲಿ ವಸಂತ ಕುಮಾರ್ (ಸಂ.), (1996), ಹೊಯ್ಸಳ ಸಂಪದ, ಹಾಸನ: ಅಖಿಲ ಭಾರತ 65ನೆಯ ಕನ್ನಡ ಸಾಹಿತ್ಯ ಸಮ್ಮೇಳನ.
5. ವಸಂತಲಕ್ಷ್ಮೀ ಕೆ., (2006), ಹಾಸನ ಜಿಲ್ಲೆಯ ಹೊಯ್ಸಳ ಬಸದಿಗಳು, ಬೆಂಗಳೂರು: ಸುಮುಖ ಪ್ರಕಾಶನ.
6. ಸಕಲೇಶ ಮ., (2002), ಹೊಯ್ಸಳೋದಯ ಸಂಶೋಧನ, ಶಿವಮೊಗ್ಗ: ಹಿಮಶೈಲ ಪ್ರಕಾಶನ.
7. ಸರಸ್ವತಿ ಎಂ., (2012), ಹೊಯ್ಸಳರ ಇತಿಹಾಸ, ಮೈಸೂರು: ವಾಚಸ್ಪತಿ ಪ್ರಕಾಶನ.
8. ಲಲಿತಾಂಬ ಎನ್. ಆರ್., (2007), ಅರಸೀಕೆರೆ ತಾಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಹಂಪಿ: ಕನ್ನಡ ವಿಶ್ವವಿದ್ಯಾಲಯ.